# ಕಾಡಿನ ಕೂಸುಗಳು



**ಕ್ಯಾಮೆರಾ ಟ್ರ್ಯಾಪ್ ಚಮತ್ಕಾರದ ಮೂಲಕ ಇಲ್ಲಿ ಸೆರೆ ಹಿಡಿಯಲಾಗಿರುವ ಕಾಡುಪ್ರಾಣಿಗಳ ಚಿತ್ರಗಳು ಅವುಗಳ ಜೀವನಶೈಲಿಗೆ ಕನ್ನಡಿ ಹಿಡಿಯುತ್ತವೆ.**

**ಆಂಗ್ಲ ಮೂಲ: ಅರ್ಜುನ್ ಶ್ರೀವತ್ಸ, ಕೃತಿ ಕಾರಂತ್**
**ಅನುವಾದ: ಕಬೀರ್ ಮಾನವ**

ಚಿತ್ರಗಳು: ಉಲ್ಲಾಸ ಕಾರಂತ



ವೈಲ್ಡ್‌ಲೈಫ್ ಕನ್ಸರ್ವೇಷನ್ ಸೊಸೈಟಿ– ಇಂಡಿಯಾ ಕಳೆದ 20 ವರ್ಷಗಳಿಂದ ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಕಾಡುಪ್ರಾಣಿಗಳ ಕ್ಯಾಮೆರಾ ಟ್ರ್ಯಾಪ್ ಅಧ್ಯಯನ ಮಾಡುತ್ತಾ ಬಂದಿದೆ. ಇದರ ಫಲ ಅನೇಕ ಪ್ರಾಣಿಗಳ ಆತ್ಮೀಯ, ಆಕರ್ಷಕ ಮತ್ತು ಕೆಲವೊಮ್ಮೆ ಹಾಸ್ಯಮಯ ಎನ್ನಿಸುವ ಜೀವನದ ಒಳನೋಟಗಳು ದೊರಕಿವೆ. ಈ ಪ್ರಾಣಿಗಳು ತಮ್ಮ ಮರಿಗಳನ್ನು ಪಾಲನೆ ಮಾಡುವಾಗ ತುಂಬಾ ರಹಸ್ಯವಾಗಿ ವರ್ತಿಸುವ ಕಾರಣ ನಮಗೆ ಈ ಮರಿಗಳು ಕಾಣ ಸಿಗುವುದೇ ಬಹಳ ಅಪರೂಪ. ಆದರೆ ಅವಿತಿಟ್ಟ ಕ್ಯಾಮೆರಾ ಟ್ರ್ಯಾಪ್ ಈ ಕಾಡು ಕೂಸುಗಳ ರಮ್ಯ ಚಿತ್ರಗಳನ್ನು ಸೆರೆಹಿಡಿದು ಇವುಗಳ ಕುಟುಂಬದ ಒಂದು ಆಲ್ಬಮ್ಮನ್ನು ನಮಗೆ ಒದಗಿಸಿದೆ.

ಮರಿಗಳನ್ನು ಸಾಕುವ ಈ ಪ್ರಾಣಿಗಳ ಜೀವನಶೈಲಿ ಕುತೂಹಲಕರ. ಮುಸುವ ಮತ್ತು ಕೋತಿ ಮರಿಗಳು ಸುಮಾರು ಎರಡು ವರ್ಷದವರೆಗೂ ತಾಯಿಯ ಮಡಿಲಲ್ಲೇ ಬೆಳೆಯುತ್ತವೆ. ತಾಯಿಯು ಇವುಗಳನ್ನು ಅಪ್ಪಿಕೊಂಡೇ ಓಡಾಡುವ, ತಿನ್ನುವ, ಹಾರುವ ಮತ್ತು ಮರದಿಂದ ಮರಕ್ಕೆ ಜಿಗಿಯುವ ದೃಶ್ಯ ಸಾಮಾನ್ಯ. ಈ ಎರಡೂ ಜಾತಿಯ ಕಪಿಗಳು ಗುಂಪಾಗಿ ಬದುಕುತ್ತವೆ. ಇವುಗಳು ನಗರ, ಹಳ್ಳಿಗಳಂತಹ ಜನನಿಬಿಡ ಪ್ರದೇಶಗಳಲ್ಲೂ ಕಾಣಸಿಗುತ್ತವೆ.

**(34ನೇ ಪುಟ ನೋಡಿ)**